ದಿನಾಂಕ : 18-10-2019 ಕ್ರಿ ಮಿ ನಂ. 74/2018

ಪಿ. ಡಬ್ಲ್ಯೂ – 1

ಈ ದಿನ ಮಧ್ಯಂತರ ಅರ್ಜಿಯ ಮೇಲೆ ಆದ ಆದೇಶದ ಮೆಲರೆಗೆ ಇಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಅರ್ಜಿದಾರ ಪರ ವಕೀಲರಿಂದ

ನನ್ನ ಆಧಾರ ಕಾರ್ಡ ಹಾಜರು ಮಾಡಿದ್ದೇನೆ. ಅದನ್ನು ನಿಪಿ ಎಂದು ಗುರುತಿಸಲಾಯಿತು. 2 ನೇ ಅರ್ಜಿದಾರಳ ಆಧಾರ ಕಾರ್ಡ ಹಾಜರು ಮಾಡಿದ್ದೆನೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು. 2 ನೇ ಅರ್ಜಿದಾರಳ ಜನನ ಪ್ರಮಾಣ ಪತ್ರದ ದೃಡಿಕೃತ ನಕಲು ಹಾಜರು ಮಾಡಿದ್ದೇನೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಎದುರುದಾರ ಪರ ವಕೀಲರಿಂದ

ನಿಪಿ 1 ನ್ನು ದಿನಾಂಕ: 17-06-2019 ರಂದು ತೆಗೆದುಕೊಂಡಿದ್ದೇವೆ ಎಂದರೆ ಸರಿ. ನಿಪಿ-2 ನ್ನು ಸಹ ಅದೇ ಸಮಯದಲ್ಲಿ ತೆಗೆದುಕೊಂಡಿದ್ದೇವೆ ಎಂದರೆ ಸರಿ. ಕೇಸಿಗೆ ಅನುಕೂಲವಾಗಲಿ ಎಂದು ನಿಪಿ-3 ನ್ನು ಹಾಜರು ಮಾಡಿದ್ದೇವೆ ಎಂದರೆ ಸರಿ. ನನ್ನ ವಿವಾಹವು ಎದುರುದಾರನೊಂದಿಗೆ ಜರುಗಿದೆ ಎಂದು ತೋರಿಸುವ ಸಂಬಂಧ ನಿಪಿ-1 ರಿಂದ 03 ನ್ನು ತಯಾರಿಸಿ ಹಾಜರು ಮಾಡಿದ್ದೇವೆ ಎಂದರೆ ಸರಿ. ನನ್ನ ತಾಯಿಯ ಹೆಸರು ಭೀಮವ್ವಾ ಚಂದ್ರಪ್ಪಾ ವ್ಯಾಪಾರಿ ಇರುತ್ತದೆ. ನನ್ನ ತಾಯಿಯ ತವರು ಮನೆ ಲಗಮೇಶ್ವರ ಎಂದರೆ ಸರಿ. ನನ್ನ ತಾಯಿ ಎದುರುದಾರನ ಅಕ್ಕ ಎಂದರೆ ಸರಿ. ಎದುರುದಾರನ ಹೆಂಡತಿಯ ಹೆಸರು ಏನು ಇರುತ್ತದೆ ಎಂದರೆ ಸಾಕ್ಷಿಯು ನಾನೇ ಆತನ ಹೆಂಡತಿ ಇರುತ್ತೇನೆ ಆದರೆ ಆತನ ಹೆಂಡತಿಯ ಹೆಸರು ಏನು ಇರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಕೇಸಿನಲ್ಲಿ ಬರೆದಿರುವ ಅಂಶಗಳ ಬಗ್ಗೆ ಮಾಹಿತಿ ಇರುತ್ತದೆ. ನನ್ನ ಅರ್ಜಿಯ ಪ್ಯಾರಾ ನಂ.3 ರಲ್ಲಿ ಎದುರುದಾರನು ಅರ್ಜಿದಾರರಿಗೆ ಯಾವುದೇ ಉಪ ಜೀವನಕ್ಕೆ ವ್ಯವಸ್ಥೆ ಮಾಡದೇ ಗೋಕಾಕ ತಾಲೂಕಾ ಪೈಕಿ ಸುಲಧಾಳ ಗ್ರಾಮದಲ್ಲಿ ಮತ್ತೊಂದು ಮದುವೆ ಮಾಡಿಕೊಂಡಿರುತ್ತಾನೆ ಎಂದು

ಬರೆದಿರುವುದು ಸುಳ್ಳು ಇರುತ್ತದೆ. ನಿಪಿ-1 ರಲ್ಲಿ ನನ್ನ ಜನ್ಮ ದಿನಾಂಕಃ01-06-1998 ಇದೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ನನ್ನ ಜನ್ಮ ದಿನಾಂಕ ಏನು ಇರುತ್ತದೆ ಎಂದು ನನಗೆ ಗೊತ್ತಿಲ್ಲ ಆದರೆ ನಮ್ಮ ತಂದೆ ತಾಯಿಯರು ಈ ಜನ್ಮ ದಿನಾಂಕವನ್ನು ಹಚ್ಚಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು 8 ನೇ ತರಗತಿ ಓದಿರುತ್ತೇನೆ. ನಾನು ಹೊಗರತಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮುಗಿಸಿರುತ್ತೆನೆ. ನನ್ನ ವರ್ಗಾವಣೆ ಪ್ರಮಾಣ ಪತ್ರದಲ್ಲಿ ನನ್ನ ಜನ್ಮ ದಿನಾಂಕವನ್ನು ನಮೂದಿಸಿದ್ದಾರೆ ಎಂದರೆ ಸರಿ. ನನ್ನ ಆಧಾರ ಕಾರ್ಡದಲ್ಲಿ ಜನ್ಮ ದಿನಾಂಕವನ್ನು ನನ್ನ ಶಾಲಾ ದಾಖಲಾತಿ ಪ್ರಕಾರ ನಮೂದಿಸಿದ್ದಾರೆ ಎಂದರೆ ಸರಿ. ನನ್ನ ಶಾಲಾ ದಾಖಲೆ ಮತ್ತು ಆಧಾರ ಕಾರ್ಡ ಪ್ರಕಾರ 2014 ರಲ್ಲಿ ನನ್ನ ವಯಸ್ಸು 15 ಇತ್ತು ಎಂದರೆ ಸರಿಯಲ್ಲ. ನನ್ನ ವಿವಾಹವು ಎದುರುದಾರನ ಮನೆಯ ಮುಂದೆ ಜರುಗಿರುತ್ತದೆ. ಮದುವೆಯ ಸಮಯದಲ್ಲಿ ನಮ್ಮಿಬ್ಬರು ಕಡೆಯ ಸಂಬಂಧಿಕರಿಗೆ ಆಹ್ವಾನ ಪತ್ರಿಕೆ ನೀಡಿದ್ದು ಇಬ್ಬರು ಕಡೆಯ ಸಂಬಂಧಿಕರು ಮದುವೆಗೆ ಬಂದಿದ್ದರು. ಮದುವೆಯ ಸಮಯದಲ್ಲಿ ವಿಡಿಯೋ ಮಾಡಿರುವುದಿಲ್ಲ. ಮದುವೆಯ ಸಮಯದಲ್ಲಿ ಪೋಟೊ ತೆಗೆದಿಲ್ಲ. ಎದುರುದಾರನು ಪೋಟೊ ತೆಗೆಸಿಕೊಳ್ಳುವುದು ಬೇಡಾ ನಾನು ಹಾಗೇ ನಿನ್ನನ್ನು ಮದುವೆ ಮಾಡಿಕೊಳ್ಳುತ್ತೆನೆಂದು ಹೇಳಿದ್ದರಿಂದ ಪೋಟೊ ತೆಗೆಸಿಕೊಂಡಿಲ್ಲ. ನಮ್ಮ ತವರು ಮನೆಯವರು ಸಹ ಮದುವೆಯ ಸಮಯದಲ್ಲಿ ಪೋಟೊ ತೆಗೆಸಿಲ್ಲ. ಎದುರುದಾರನು ಪೋಟೊ ತೆಗೆಸಿಕೊಳ್ಳುವುದು ಬೇಡಾ ಎಂದು ನಮ್ಮ ತಂದೆ ತಾಯಿಯವರ ಹತ್ತಿರ ಹೇಳಿದ್ದರು. ಮದುವೆಯಾಗಿ 2-3 ತಿಂಗಳ ನಂತರ ಎದುರುದಾರನು ನನ್ನ ತಂದೆ ತಾಯಿಯ ಮುಂದೆ ಪೋಟೊ ತೆಗೆಸುವುದು ಬೇಡಾ ಎಂದು ಹೇಳಿರುವ ವಿಷಯ ನನಗೆ ಗೊತ್ತಾಗಿರುತ್ತದೆ. ಪೋಟೊವನ್ನು ತೆಗೆಸುವುದು ಬೇಡಾ ಎಂದು ಎದುರುದಾರನು ಯಾಕೆ ಹೇಳಿರುತ್ತಾನೆ ಎಂದು ನನ್ನ ತಂದೆ ತಾಯಿ ಬಳಿ ಕೇಳಿಲ್ಲ. ನನ್ನ ಗಂಡ ಎಂಬ ವಿಶ್ವಾಸದಿಂದ ಆತನ ಬಳಿ ಪೋಟೊ ತೆಗೆಸದೆ ಇರುವುದರ ಬಗ್ಗೆ ಕೇಳಿಲ್ಲ. ನನ್ನ ಬಳಿ ಮದುವೆ ಆಮಂತ್ರಣ ಪತ್ರಿಕೆ ಇರದೇ ಇದ್ದುದರಿಂದ ಅವುಗಳನ್ನು ಹಾಜರು ಮಾಡಿಲ್ಲ

2014 ರಲ್ಲಿ ಎದುರುದಾರನು ನನ್ನನ್ನು ಮದುವೆ ಮಾಡಿಕೊಂಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಎದುರುದಾರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮ್ಪಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ

ದಿನಾಂಕ ಃ 18-10-2019 ಓ ಎಸ್ ನಂ. 214/2015

ಪಿ. ಡಬ್ಲ್ಯೂ - 1

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ</u>

ಈ ದಿನ ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳ ಬಗ್ಗೆ ಮಾಹಿತಿ ಇರುತ್ತದೆ. ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದು ಅದನ್ನು ನಾನು ಓದಿ ತಿಳಿದುಕೊಂಡ ನಂತರ ಅದಕ್ಕೆ ಸಹಿ ಮಾಡಿರುತ್ತೇನೆ.

ವಾದ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡುವ ಯಾವುದೇ ಸಕಾರಣಗಳು ಇರದೇ ಇದ್ದುದ್ದರಿಂದ ವಾದಿ ಪರ ವಕೀಲರ ಕೋರಿಕೆಯನ್ನು ತಿರಸ್ಕರಿಸಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಪಾಟೀ ಸವಾಲು ಃ ಪ್ರತಿ ವಾದಿ ಪರ ವಕೀಲರಿಂದ</u>

ಪ್ರತಿವಾದಿಯರನ್ನು ಹಾಗೂ ಅವರ ಪರ ವಕೀಲರನ್ನು ಮೂರು ಬಾರಿ ಕೂಗಿಸಲಾಗಿ ಗೈರು ಹಾಜರು ಇರುತ್ತಾರೆ. ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸದೇ ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮ್ಹಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ

ದಿನಾಂಕ : 18-10-2019 ಕ್ರಿ. ಮಿ ನಂ. 81/2018

ಪಿ. ಡಬ್ಲ್ಯೂ - 1

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ : ಅರ್ಜಿದಾರ ಪರ ವಕೀಲರಿಂದ</u>

ಈ ದಿನ ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳ ಬಗ್ಗೆ ಮಾಹಿತಿ ಇರುತ್ತದೆ. ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದು ಅದನ್ನು ನಾನು ಓದಿ ತಿಳಿದುಕೊಂಡ ನಂತರ ಅದಕ್ಕೆ ಸಹಿ ಮಾಡಿರುತ್ತೇನೆ. ನಾನು ಈ ಕೆಳಕಂಡ ದಾಖಲೆಯನ್ನು ಹಾಜರು ಮಾಡುತ್ತಿದ್ದೇನೆ.

ನನ್ನ ವಿವಾಹ ಆಮಂತ್ರಣ ಪತ್ರಿಕೆ ಹಾಜರು ಮಾಡಿದ್ದೇನೆ ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ನಾನು ನನ್ನ ಅರ್ಜಿಯಲ್ಲಿ ಕೇಳಿದಂತೆ ಆದೇಶ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

<u>ಪಾಟೀ ಸವಾಲು : ಎದುರುದಾರ ಪರ ವಕೀಲರಿಂದ</u>

ಎದುರುದಾರ ಮತ್ತು ಅವರ ಪರ ವಕೀಲರನ್ನು ಮೂರು ಬಾರಿ ಕೂಗಿಸಲಾಗಿ ಗೈರು ಹಾಜರು ಇರುತ್ತಾರೆ. ಪಾಟೀ ಸವಾಲನ್ನು ಮುಂದೂಡುವ ಯಾವುದೇ ಸಕಾರಣಗಳು ಇರದೇ ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ